

ನಗರ ಪ್ರದೇಶದಲ್ಲಿ ಈಗೀಗ ಈಜುಕೊಳ ಕುಟುಂಬದ ಎಲ್ಲ ಸದಸ್ಯರ ವಿಹಾರ ತಾಣವಾಗಿ ಪರಿಣಮಿಸುತ್ತಿದೆ. ದಂಪತಿಗಳು ತಮ್ಮ ಮಕ್ಕಳೊಂದಿಗೆ ಒಟ್ಟಿಗೆ ಈಜಲು ತೆರಳುವ ಪರಂಪರೆ ಕೂಡ ಬೆಳೆದಿದೆ. ನಗರದ ಯಾವುದೇ ಈಜುಕೊಳಕ್ಕೆ ಹೋದರೆ ಪುಟಾಣಿಗಳಿಗೆ ಅವರ ಅಪ್ಪ–ಅಮ್ಮ ಇಲ್ಲವೆ ಸಹೋದರ–ಸಹೋದರಿಯರು ಈಜು ಹೇಳಿಕೊಡುವ ದೃಶ್ಯಗಳೂ ಕಣ್ಣಿಗೆ ಬೀಳುತ್ತವೆ.

ಈಜಿನಿಂದ ಸಿಕ್ಕಾಪಟ್ಟೆ ಲಾಭಗಳಿವೆ ಎಂದಾದರೆ ನಾವು ಈಜಲು ಎಲ್ಲಿ ಹೋಗಬೇಕು ಎಂಬ ಪ್ರಶ್ನೆ ಕಾಡುತ್ತದೆ. ದೊಡ್ಡ ನಗರಗಳ ಐಷಾರಾಮಿ ಅಪಾರ್ಟ್‌ಮೆಂಟ್‌ಗಳಲ್ಲಿ ಈಜುಕೊಳ ಇದ್ದೇ ಇರುತ್ತವೆ. ಈಗೀಗ ಮಧ್ಯಮ ಗಾತ್ರದ ಅಪಾರ್ಟ್‌ಮೆಂಟ್‌ಗಳಲ್ಲೂ ಈಜುಕೊಳ ನಿರ್ಮಿಸುವ ಪರಿಪಾಠ ಬೆಳೆದಿದೆ. ಅಲ್ಲಿನ ನಿವಾಸಿಗಳಿಗೆ ಈಜುಕೊಳ ಹುಡುಕಿಕೊಂಡು ಹೋಗಬೇಕಾದ ಅಗತ್ಯ ಕಾಡುವುದಿಲ್ಲ. ಆದರೆ, ಇತರರು ಎಲ್ಲಿ ಹೋಗಬೇಕು? ಬೆಂಗಳೂರಿನ ಮಹಾನಗರ ಪಾಲಿಕೆಯ ಪ್ರಧಾನ ಕಚೇರಿಯ ಆವರಣದಲ್ಲಿ ನಿರ್ಮಿಸಿದ್ದ ಮೊದಲ ಈಜುಕೊಳವನ್ನು ಈಗ ಮುಚ್ಚಲಾಗಿದ್ದು, ಅಲ್ಲೀಗ ಉದ್ಯಾನ ಹಾಗೂ ಕಟ್ಟಡಗಳು ಮೇಲೆದ್ದಿವೆ. ಹಲಸೂರು ಕೆರೆ ದಂಡೆಯ ಮೇಲಿದ್ದ ಕೆನ್ಸಿಂಗ್ಟನ್ ಈಜುಕೊಳವನ್ನೂ ಮುಚ್ಚಲಾಗಿದೆ. ಒಂದೆಡೆ ಖಾಸಗಿ ಈಜುಕೊಳಗಳ ಸಂಖ್ಯೆ ಹೆಚ್ಚುತ್ತಿದ್ದರೆ, ಇನ್ನೊಂದೆಡೆ ಸಾರ್ವಜನಿಕ ಈಜುಕೊಳಗಳ ಸಂಖ್ಯೆ ಕಡಿಮೆ ಆಗುತ್ತಿದೆ.

ಬಸವನಗುಡಿ ಅಕ್ವಾಟಿಕ್ ಸೆಂಟರ್, ಸ್ವಿಮ್ ಲೈಫ್, ನಿಷಾ ಮಿಲ್ಲೆಟ್ಸ್ ಸ್ವಿಮ್ಮಿಂಗ್ ಅಕಾಡೆಮಿ, ನೆಟ್ಟಕಲ್ಲಪ್ಪ ಅಕ್ವಾಟಿಕ್ ಸೆಂಟರ್, ಗ್ಲೋಬಲ್ ಸ್ವಿಮ್ಮಿಂಗ್ ಸೆಂಟರ್ ಸೇರಿದಂತೆ ಹಲವು ಕ್ಲಬ್‌ಗಳಲ್ಲಿ ಅತ್ಯಾಧುನಿಕ ಈಜುಕೊಳದ ಸೌಲಭ್ಯವಿದೆ. ಪಂಚತಾರಾ ಹೋಟೆಲ್‌ಗಳಲ್ಲೂ ಈಜುಕೊಳಗಳನ್ನು ಬಾಡಿಗೆ ನೀಡಲಾಗುತ್ತದೆ. ನಮ್ಮ ಪಾಕೆಟ್ ಗಾತ್ರಕ್ಕೆ ತಕ್ಕಂತೆ ಯಾವ ಈಜುಕೊಳಕ್ಕೆ ಹೋಗಬೇಕು ಎಂಬುದನ್ನು ನಿರ್ಧರಿಸಬಹುದು. ಪ್ರತಿದಿನ ಈಜಲು ಹೋಗುವುದಾದರೆ ತಿಂಗಳ ಪಾಸ್ ಪಡೆಯಬಹುದು ಅಥವಾ ಯಾವುದೇ ಕ್ಲಬ್‌ನ ಆಜೀವ ಸದಸ್ಯರಾಗಬಹುದು.

ಯಾವುದೇ ವ್ಯಕ್ತಿ 7–8 ದಿನಗಳಲ್ಲಿ ಈಜಲು ಕಲಿಯಬಹುದು. ಕೆಲವು ಅಕಾಡೆಮಿಗಳು ವೈಯಕ್ತಿಕ ಗಮನಹರಿಸಿ, 10 ಕ್ಲಾಸ್‌ಗಳಲ್ಲಿ ಈಜು ಕಲಿಸಿಕೊಡಲು ₹ 35 ಸಾವಿರವರೆಗೂ ಶುಲ್ಕ ಪಡೆಯುತ್ತವೆ. ಎಂಬಿಸಿ ಗಾಲ್ಫ್ ಲಿಂಕ್, ಗ್ರ್ಯಾಂಡ್ ಮರ್ಕ್ಯೂರ್, ಫಾರ್ಚೂನ್ ಸೆಲೆಕ್ಟ್ ಟ್ರಿನಿಟಿಯಂತಹ ಐಷಾರಾಮಿ ತಾಣಗಳಲ್ಲೂ ಈಜು ಕಲಿಕೆಗೆ ಅವಕಾಶವಿದೆ. ಆದರೆ, ಅಲ್ಲಿನ ಬಿಲ್ ಪಾವತಿಸಲು ನಿಮ್ಮ ಜೇಬು ದೊಡ್ಡದಿರಬೇಕಷ್ಟೇ. ಅದೇ ಹಲವು ಕ್ಲಬ್‌ಗಳು ರಜಾ ಅವಧಿಯಲ್ಲಿ ಈಜು ಕಲಿಕೆಗೆ ನಡೆಸುವ ಶಿಬಿರಗಳಿಗೆ ತುಂಬಾ ಕಡಿಮೆ ಶುಲ್ಕ ಆಕರಿಸಲಾಗುತ್ತದೆ.

‘ಈಗೀಗ ಈಜಿನ ಕುರಿತು ಎಲ್ಲೆಡೆ ಜನಜಾಗೃತಿ ಮೂಡಿದೆ. ಈಜುಕೊಳದಲ್ಲಿ ಕಾಲ ಕಳೆಯುವುದು ನಗರ ಜೀವನಶೈಲಿಯ ಬಹುಮುಖ್ಯ ಆಯ್ಕೆಯಾಗಿ ಪರಿಣಮಿಸಿದೆ. ದೊಡ್ಡ ನಗರಗಳ ಮಧ್ಯಮ ಗಾತ್ರದ ಅಪಾರ್ಟ್‌ಮೆಂಟ್‌ಗಳಲ್ಲೂ ಈಗ ಈಜುಕೊಳಗಳಿವೆ’ ಎನ್ನುತ್ತಾರೆ ನಿಷಾ

**ಹೊರಗಿನ ತಾಪಮಾನ, ಒಳಗಿನ ಉದ್ವೇಗ ಎರಡನ್ನೂ ಹೋಗಲಾಡಿಸುವ ಈಜು ಕುಟುಂಬದ ಸದಸ್ಯರ ನೆಚ್ಚಿನ ಕ್ರೀಡೆಯಾಗಿದೆ.**